**O.S. 30/2021**

ಪ್ರಮಾಣೀಕರಿಸಲಾದ ದಿನಾಂಕಃ **22.07.2025.**

<u>ಪಾಟೀ ಸವಾಲು ವಾದಿ ಪರ ಶ್ರೀ. ಎನ್ ಪಿ ಎಂ ವಕೀಲರಿಂದಃ</u>

ನಾವು ಖರೀದಿ ಮಾಡಿದ ಆಸ್ತಿ ಅಣ್ಣಾಜಿ ರಾವ್‌ರವರ ಒಟ್ಟು ಕುಟುಂಬದ ಆಸ್ತಿಯಲ್ಲಿ ಒಂದು ಭಾಗ ಎಂದರೆ ಸರಿ. 1966 ರಲ್ಲಿ ಅಣ್ಣಾಜಿ ರಾವ್‌ರವರು ಒಟ್ಟು ಕುಟುಂಬದ ಆಸ್ತಿಯನ್ನು ಉಪನೋಂದಣಾಧಿಕಾರಿ ಕಚೇರಿಯಲ್ಲಿ ಪತ್ರದ ಮೂಲಕ ವಿಭಾಗ ಮಾಡಿಕೊಂಡಿರುವುದು ಗೊತ್ತು. 1966 ರಲ್ಲಿ ಕೃಷ್ಣ ಮೂರ್ತಿ ರಾವ್, ಶ್ಯಾಮ್ ರಾವ್ ಮತ್ತು ನನ್ನ ಮಾವನವರಾದ ನರಸಿಂಹ ಮೂರ್ತಿ ರಾವ್‌ಗಳ ನಡುವೆ ಸಮನಾಗಿ 3 ವಿಭಾಗದಲ್ಲಿ ಆಸ್ತಿಗಳ ವಿಭಾಗ ಆಗಿರುತ್ತದೆ. ವಿಭಾಗವಾದ ಆಸ್ತಿಗಳು ಈಗಲೂ ಕುಟುಂಬದಲ್ಲೇ ಇದೆ ಎಂದರೆ ಸರಿ. ಅಣ್ಣಾಜಿ ರಾವ್‌ರವರ ಒಟ್ಟು ಆಸ್ತಿ ಒಟ್ಟು ಬಾಣೆ ಮತ್ತು ತರಿ ಜಮೀನು 44.91 ಎಕರೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡ ಬದ್ರಿ ನಾರಾಯಣ ರಾವ್. ನನ್ನ ಮಾವನವರಾದ ನರಸಿಂಹ ಮೂರ್ತಿ ರಾವ್‌ರವರಿಗೆ ಒಟ್ಟು 7 ಜನ ಮಕ್ಕಳು ಅವರುಗಳು, ನಾಗರಾಜು ಬಿ ಎನ್, ರಾಘವೇಂದ್ರ , ಸುಮಿತ್ರ, ಕಮಲ, ಬದ್ರಿ ನಾರಾಯಣ, ವಾಣಿ, ಲೀಲಾ.

ನನ್ನ ಮಾವನ ಅಣ್ಣಾನಾದ ಶ್ಯಾಮ್ ರಾವ್ ರವರಿಗೆ 4 ಜನ ಮಕ್ಕಳು ಗುಂಡು ರಾವ್, ಕೃಷ್ಣ ಮೂರ್ತಿ, ರಾಮರಾವ್, ಸುಂದರ್ ರಾವ್. ನನ್ನ ಮಾವನ ಇನ್ನೊಬ್ಬ ಅಣ್ಣಾನಾದ ಕೃಷ್ಣ ಮೂರ್ತಿ ರಾವ್ ರವರಿಗೆ ಎಷ್ಟು ಜನ ಮಕ್ಕಳು ಗೊತ್ತಿಲ್ಲ.

1996 ರಲ್ಲಿ ಶ್ಯಾಮ್ ರಾವ್ ರವರ ಮಗನಾದ ಗುಂಡು ರಾವ್ ಅವರ ಮಕ್ಕಳಾದ ಲಕ್ಷೀ ನರಸಿಂಹ ಮತ್ತು ಜಗದೀಶರವರಿಂದ ಖರೀದಿಸಿರುತ್ತೇವೆ. ಖರೀದಿಸಿದ ಜಮೀನಿನ ಆರ್ ಟಿ ಸಿ ಹಾಜರುಪಡಿಸಿಲ್ಲ ಎಂದರೆ ಸರಿ. ನನ್ನ ಹೆಸರಿನಲ್ಲಿ 1996 ರಲ್ಲಿ ಖರೀದಿಸಿದ ಜಮೀನಿನ ಆರ್ ಟಿ ಸಿ ಇದೆ. ಸರ್ವೆ ನಂ 232, 187/1 ಮತ್ತು 233 ಆರ್ ಟಿ ಸಿ ನನ್ನ ಹೆಸರಿನಲ್ಲಿ ಇದೆಯೇ ಎಂದರೆ ನನಗೆ ನೆನಪಿಲ್ಲ. ನಿ. ಡಿ. 2 ದಾಖಲೆ ಮಾಡಿಸಿಕೊಳ್ಳುವಾಗ ಕಾನೂನಿನ ಸಲಹೆ ಪಡೆದಿದ್ದೆ. ಯಾವ ಯಾವ ದಾಖಲಾತಿಗಳನ್ನು ವಕೀಲರಿಗೆ ಸಲಹೆಗೆ ಕೊಟ್ಟಿದ್ದೆ ನೆನಪಿಲ್ಲ. ಅಣ್ಣಾಜಿ ರಾವ್‌ರವರ ಒಟ್ಟು ಕುಟುಂಬದ ಆಸ್ತಿ ಬಟಮಾನ್ಯ ಆಸ್ತಿ

(Inam land) ಎಂದರೆ ಸರಿ. ಬಟಮಾನ್ಯ ಆಸ್ತಿ ಜಮಾ ಬಂದಿಗಳಲ್ಲಿ ಮತ್ತು ಈಗಿನ ಆರ್ ಟಿ ಸಿ ಗಳಲ್ಲಿ ನಮೂದಾಗಿದೆ ಎಂದರೆ ಇರಬಹುದು.

ಸರ್ವೆ ನಂ 232/1 12 ಎಕರೆ 90 ಸೆಂಟ್ ಈಗಲೂ ಜಂಟಿಯಾಗಿ ಆರ್ ಟಿ ಸಿ ಯಲ್ಲಿದೆ ಎಂದರೆ ಸರಿ. ಸರ್ವೆ ನಂ 187/2, 2 ಎಕರೆ 30 ಸೆಂಟ್ ಈಗಲೂ ಜಂಟಿಯಾಗಿ ಆರ್ ಟಿ ಸಿ ಯಲ್ಲಿದೆ ಎಂದರೆ ಸರಿಯಲ್ಲ. ಈ 2 ಆಸ್ತಿಗಳೂ ಒಟ್ಟು ಸೇರಿದರೆ 15 ಎಕರೆ 20 ಸೆಂಟ್ ಆಗುತ್ತದೆ ಈಗಲೂ ಜಂಟಿಯಾಗಿ ಆರ್ ಟಿ ಸಿ ಯಲ್ಲಿದೆ ಎಂದರೆ ಸರಿಯಲ್ಲ. ನನ್ನ ಹೆಸರಿಗೆ 1996 ರ ಕ್ರಯಪತ್ರದಂತೆ ಖಾತೆ ಯಾವಾಗ ಆಯಿತು ನೆನಪಿಲ್ಲ. ಖಾತೆ ಯಾವ ಕಚೇರಿಯಲ್ಲಿ ಆಯಿತು ನೆನಪಿಲ್ಲ. ನನ್ನ ಜಮೀನುಗಳ ಆರ್ ಟಿ ಸಿ ಕೊನೆಯಿದಾಗಿ ಯಾವಾಗ ನೋಡಿದೆ ನೆನಪಿಲ್ಲ. ದಿ. 06.09.2012 ರಲ್ಲಿ ನಾನು ಮತ್ತು ನನ್ನ ಗಂಡ ನನ್ನ ಮಗನಾದ ಪ್ರದೀಪ್ ರವರಿಗೆ Power of attorney ನೀಡಿದೆ ಎಂದರೆ ಸರಿ. ನನ್ನ ಜಮೀನುಗಳ ಖಾತೆಯನ್ನು ನನ್ನ ಹೆಸರಿಗೆ ವರ್ಗಾಯಿಸಲು ನನ್ನ ಮಗನಿಗೆ ಅಧಿಕಾರ ಕೊಟ್ಟಿರುತ್ತೇನೆ ಎಂದರೆ ಸರಿ. ನನ್ನ ಮಗ GPA ಆಧಾರ ವಿರಾಜಪೇಟೆ ತಾಲ್ಲೂಕು ತಹಶೀಲ್ದಾರ್ ಕಚೇರಿಯಲ್ಲಿ ಖಾತೆ ವರ್ಗಾವಣೆಗೆ ಅರ್ಜಿ ಕೊಟ್ಟಿರುತ್ತಾನೆ ಎಂದರೆ ನೆನಪಿಲ್ಲ. ಈ ಅರ್ಜಿ ತಿರಸ್ಕೃತಗೊಂಡಿತ್ತು ಎಂದರೆ ನನಗೆ ನೆನಪಿಲ್ಲ. ನನ್ನ ವಿಕ್ರಯದಾರರ ಹೆಸರಿನಲ್ಲಿ ಆಸ್ತಿಗಳ ಜಮಾ ಬಂದಿ ಇರಲಿಲ್ಲ ಆದ್ದರಿಂದ ಅವರು ಮಾಲೀಕರಕಲ್ಲ ಆದ್ದರಿಂದ ತಹಶೀಲ್ದಾರ್ ಕಚೇರಿಯಲ್ಲಿ ನನ್ನ ಅರ್ಜಿ ತಿರಸ್ಕೃತಗೊಂಡಿತ್ತು ಎಂದರೆ ಸುಳ್ಳು. ಈ ತಿರಸ್ಕೃತ ಆದೇಶವನ್ನು ಪ್ರಶ್ನಿಸಿ ಉಪವಿಭಾಗಾಧಿಕಾರಿಗಳ ಕಚೇರಿ ಮಡಿಕೇರಿಯಲ್ಲಿ R. A. 146/2017-2018 ಸಲ್ಲಿಸಿರುತ್ತೇನೆ ಎಂದರೆ ಸರಿ, ಮುಂದುವರೆದು ಸಾಕ್ಷಿಯು ಸರ್ವೆ ನಂ 232 ಜಮೀನಿಗೆ ಸಂಬಂದಪಟ್ಟಂತೆ ತಹಶೀಲ್ದಾರ್ ಕಚೇರಿಯಲ್ಲಿ ತಿರಸ್ಕೃತಗೊಂಡಿರುತ್ತದೆ. ಸರ್ವೆ ನಂ 232 ಜಮೀನಲ್ಲದೆ 187/1, 187/2 ಮತ್ತು 233 ಆಸ್ತಿಗಳು ತಹಶೀಲ್ದಾರ್ ಕಚೇರಿಯಲ್ಲಿ ಒಳಗೊಂಡಿತ್ತು ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಲಾಗಿ ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/xxx-

ಸಿವಿಲ್ ನ್ಯಾಯಾಧೀಶರು,ಪೊನ್ನಂಪೇಟೆ.